ಈ ಭೂಸ್ವಾಧೀನತೆಗೆ ಆಕ್ಷೇಪಣೆಗಳಿದ್ದಲ್ಲಿ, ಭೂಸ್ವಾಧೀನ ಕಾಯ್ದೆ 2013ರ ಕಲಂ 15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣೆಯನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗ ವಿಶೇಷ ಭೂಸ್ವಾಧೀನಾಧಿಕಾರಿ, ಮಹಾನಗರಪಾಲಿಕೆ, ಮಂಗಳೂರು ಇವರಿಗೆ ಲಿಖಿತವಾಗಿ ಸಲ್ಲಿಸಬೇಕು. ನಂತರ ಬಂದ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ.

ಈ ಜಮೀನುಗಳ ಭೂಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಹಾಗೂ ಇತರ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಈ ಬಗ್ಗೆ ಭೂಸ್ವಾಧೀನ ಕಾಯ್ದೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 11(4) ರ ಮೇರೆಗೆ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸ್ವಾಧೀನಗೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಆಡವಿಡುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

-/ಸಹಿ/-
ಜಿಲ್ಲಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದ ಎಡಿಬಿ ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಶುದ್ಧೀಕರಣ ಘಟಕ ಮತ್ತು Back Wash Treatment Plant ಸ್ಥಾಪಿಸಲು ಭೂಸ್ವಾಧೀನಗೊಳ್ಳಲಿರುವ ಜಮೀನಿನ ವಿವರ

| ಕ್ರಮ ಸಂಖ್ಯೆ | ಭೂಸ್ವಾಧೀನವಾಗುವ ಜಮೀನಿನ ಖಾತೆದಾರರ ಹೆಸರು | ಸ.ನಂ | ಹಿಸ್ಸಾ ನಂ | 11(1) ಭೂಸ್ವಾಧೀನದ ವಿಸ್ತೀರ್ಣ | | | | | ಚಕ್ಕುಬಂದಿ | | | |
|---|---|---|---|---|---|---|---|---|---|---|---|---|
| | | | | ಭೂ ಸ್ವಾಧೀನವಾಗುವ ಒಟ್ಟು ವಿಸ್ತೀರ್ಣ (ಎಕ್ರೆ.ಸೆಂಟ್ಸ್) | ಖರಾಬು | ಖರಾಬು ವಜಾ ಖಾತಾ ಉಳಿಕೆ ವಿಸ್ತೀರ್ಣ (ಎಕ್ರೆ-ಸೆಂಟ್ಸ್) | ತರಹೆ | ದರ | ಉತ್ತರ | ಪೂರ್ವ | ದಕ್ಷಿಣ | ಪಶ್ಚಿಮ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| ಜಿಲ್ಲೆ: ದಕ್ಷಿಣ ಕನ್ನಡ | | | | ತಾಲೂಕು: ಬಂಟ್ವಾಳ | | ಹೋಬಳಿ: ಪಾಣೆಮಂಗಳೂರು | | | ಗ್ರಾಮ: ತುಂಬೆ | | | |
| 1 | ರವಿಶಂಕರ ಆಳ್ವ | 40/1A1BP2 | - | 0.77.00 | - | - | ಖುಷ್ಕಿ | 0.31 | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ |
| 2 | ರವಿಶಂಕರ ಆಳ್ವ | 40/1ಸಿ | - | 0.73.00 | - | - | ಖುಷ್ಕಿ | 0.30 | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ |
| 3 | ವಿಮಲ ಬಿನ್ ಅಂಗರ ಗಟ್ಟಿ | 40/1B1A | - | 0.30.00 | - | - | ಖುಷ್ಕಿ | 0.12 | ಸ ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ |

ಪೂರ್ವಕವಾಗಿ ವಾಹನದ ಮಾಲೀಕರ / ಅವರಿಂದ ನಿಯೋಜಿತ ವ್ಯಕ್ತಿಗಳ ಶಿಲುವಳಿಕೆ ಹಾಗೂ ಶಾಮೀಲಾತಿಯೊಂದಿಗೆ ಬಳಸಲ್ಪಟ್ಟಿರುವ ವಾಹನಗಳೆಂದು ಪರಿಗಣಿಸಿ ಅವುಗಳನ್ನು 1963 ನೇ ಕರ್ನಾಟಕ ಅರಣ್ಯ ಕಾಯ್ದೆಯ ವಿಧಿ 71 ಎ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಈ ಮೂಲಕ ಪ್ರಕಟಿಸಿ ಸಂಬಂಧಪಟ್ಟವರಿಗೆ ತಿಳಿಯಪಡಿಸಲಾಗಿದೆ.

ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ(ಜಾಗೃತ)
ಮಂಗಳೂರು

**PR-72**

**ಕಂದಾಯ ಇಲಾಖೆ**

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು - 575 001**

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ, ಪುನರ್ ನಿರ್ಮಾಣ ಕಾಯ್ದೆ 2013ರ**

**(ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕಲಂ 11(1) ರಂತೆ ಮಾಡಿದ ಅಧಿಸೂಚನೆ.**

ಎಲ್.ಎ.ಕ್ಯೂ.ಎಸ್.ಆರ್.106/2017/12649/ಬಿ1 ದಿನಾಂಕ: 01/06/2020

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದ ಎಡಿಬಿ ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಶುಧೀಕರಣ ಘಟಕ ಮತ್ತು Back Wash Treatment Plant ಸ್ಥಾಪಿಸಲು ಬಂಟ್ವಾಳ ತಾಲೂಕು ತುಂಬೆ ಗ್ರಾಮದಲ್ಲಿ ಒಟ್ಟು 2.52.00 ಎಕ್ರೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನಗೊಳಿಸಲು ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಲು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಕಂಡುಬಂದಿದ್ದು, ಭೂಸ್ವಾಧೀನಕ್ಕೆ ಒಳಪಡುವ ಗ್ರಾಮದಲ್ಲಿ ಅಗತ್ಯವಿರುವ ಜಮೀನಿನ ಬಗ್ಗೆ ಭೂಸ್ವಾಧೀನ ಕಾಯ್ದೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 4 ಹಾಗೂ ಭೂಸ್ವಾಧೀನ ನಿಯಮಗಳು 2015 (ಕರ್ನಾಟಕ) ನಿಯಮ 5 ರನ್ವಯ ಸರ್ಕಾರದ ಅಧಿಸೂಚಿತ ಸಂಸ್ಥೆಯಾದ ಲೀಡ್ (ರಿ), ವಿನೋಬನಗರ, ಶಿವಮೊಗ್ಗ ಇವರಿಂದ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನದ ವರದಿಯನ್ನು ಪಡೆಯಲಾಗಿದೆ. ಈ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನವು ಸರಕಾರದ ಆದೇಶ ಸಂಖ್ಯೆ ದಿನಾಂಕ ಕಂಇ 23 ಎಸ್‌ಆರ್ ಆರ್ 2019 ದಿನಾಂಕ 08/08/2019 ರಂತೆ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ. ಆದ್ದರಿಂದ ಈ ಕೆಳಕಂಡ ಹಿಡುವಳಿ ಜಮೀನುಗಳನ್ನು ಸ್ವಾಧೀನಪಡಿಸಲು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ (ದಿನಾಂಕ 01.01.2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕಲಂ 11 ಹಾಗೂ ಭೂಸ್ವಾಧೀನ ನಿಯಮಗಳು 2015 (ಕರ್ನಾಟಕ) ನಿಯಮ 20 ರನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಕಾನೂನಿನ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಕಾರ್ಯಪಾಲನೆ ಅಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಮಹಾನಗರಪಾಲಿಕೆ, ಮಂಗಳೂರು ಇವರಿಗೆ ನೀಡಲಾಗಿದೆ. ಸದರಿ ಕಾಯ್ದೆಯ ಕಲಂ 43ರ ಮೇರೆಗೆ ಪುನರ್ವಸತಿ, ಪುನರ್ ನಿರ್ಮಾಣ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ಅಪರ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ನೀಡಲಾಗಿದೆ.

| | | | | | | | | | | | | |
|---|---|---|---|---|---|---|---|---|---|---|---|---|
| | ಪಾರ್ವತಿ ಕೋಂ ದಿ ಶಿವಪ್ಪ ಗಟ್ಟಿ<br>ಪುಷ್ಪಲತ ಗಟ್ಟಿ<br>ರಾಕೇಶ್<br>ರೋಷನ್ ಗಟ್ಟಿ<br>ಹೇಮಂತ ಗಟ್ಟಿ<br>ಮಮತ ಗಟ್ಟಿ | | | | | | | | | | | |
| 4 | ವನಿತಾ ಎಚ್ ಆಳ್ವ<br>ಗೀತಾ ಎಸ್ ಶೆಟ್ಟಿ<br>ಚಿತ್ರ ಎಸ್ ಶೆಟ್ಟಿ-ಕೆ ವಿಠಲ ರೈ ರವರ ಮಕ್ಕಳು | 40/1D1 | - | 0.72.00 | - | - | ಖುಷ್ಕಿ | 0.58 | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ | ಸ.ಡಿ.ಲೈನ್ |
| | ಒಟ್ಟು | | | 2.52.00 | | | | | | | | |

-/ಸಹಿ/-
ಜಿಲ್ಲಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು